# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\627\2017\ಸನಿಕಾಸ–1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:31/07/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಕೆ.ಪಿ.ಈಶ್ವರ ಬಿನ್ ಪರಸಪ್ಪ, ಸಂತೇ ಮೈದಾನ, ಅನವಟ್ಟಿ ಹೋಬಳಿ, ಸೊರಬ ತಾಲ್ಲೂಕ್, ಶಿವಮೊಗ್ಗ ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕ್ ಅನವಟ್ಟಿ ಹೋಬಳಿ ಸಂತೇ ಮೈದಾನ ನಿವಾಸಿಯಾದ ಶ್ರೀ.ಕೆ.ಪಿ.ಈಶ್ವರ ಬಿನ್ ಪರಸಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕ್ ಅನವಟ್ಟಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ.ಸೋಮಶೇಖರ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–** ಅನವಟ್ಟಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸಂಬಂಧಿಸಿದ ಸಂತೇ ಸುಂಕ ಮತ್ತು ಮಳಿಗೆಗಳು ಹರಾಜು ವಸೂಲಿ ಹಕ್ಕಿನ ಸಲುವಾಗಿ, ಪ್ರತಿ ವರ್ಷ ಹರಾಜು ಪ್ರಕ್ರಿಯೆ ನಡೆದು, ಹೆಚ್ಚು ಮೊತ್ತಕ್ಕೆ ಮಳಿಗೆ ಬಾಡಿಗೆ ಹಕ್ಕು ಪಡೆದವರಿಂದ ಮತ್ತು ಸಂತೇ ಸುಂಕ ವಸೂಲಿ ಪಡೆದವರಿಂದ ಹರಾಜಿನ ಮೊತ್ತ ಪಡೆದು, ಪಂಚಾಯತ್ ಅಭಿವೃದ್ಧಿ ಕಾರ್ಯ ಮಾಡುತ್ತಿದ್ದು, ಆದರೆ ಹರಾಜುದಾರರು 2006–07 ರಿಂದ 2013–14ನೇ ಸಾಲಿನವರೆಗೆ ಸುಮಾರು ₹21 ಲಕ್ಷ ಬಾಕಿ ಉಳಿಸಿಕೊಂಡಿದ್ದಾರೆ. ಆ ತೆರಿಗೆ ಹಣವನ್ನು ವಸೂಲಿ ಮಾಡುವಂತೆ ಗ್ರಾಮ ಪಂಚಾಯತ್ ಸಭೆಯಲ್ಲಿ ಚರ್ಚಿಸಿ, ಎದುರುದಾರರಿಗೆ ತಿಳಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ತಾವು ದಿನಾಂಕ:22/09/15ರಂದು ಸದರಿ ಗ್ರಾಮ ಪಂಚಾಯತ್‌ನ ಅಧಿಕಾರ ವಹಿಸಿಕೊಂಡಿದ್ದು, 2006–07 ರಿಂದ 2013–14ನೇ ಸಾಲಿನವರೆಗೆ ಹರಾಜಿನ ಬಾಬ್ತು ಬಾಕಿ ಮತ್ತು ವಸೂಲಾತಿಗೆ ಸಂಬಂಧಿಸಿದಂತೆ, ಹಲವಾರು ನೌಕರರು ಕರ್ತವ್ಯ ನಿರ್ವಹಿಸಿದ್ದು, ಸದರಿ ಗ್ರಾಮ ಪಂಚಾಯತ್‌ನ ಹರಾಜು ಬಾಬ್ತು ಬಾಕಿ ಮತ್ತು ವಸೂಲಾತಿಗೆ ಸಂಬಂಧಿಸಿದಂತೆ, ಸಂಬಂಧಿಸಿದ ಬಾಕಿದಾರರಿಗೆ ನೋಟೀಸ್ ಜಾರಿ ಮಾಡಲಾಗಿದೆ ಹಾಗೂ ಬಾಕಿ ವಿವರಗಳಿಗೆ ನೋಟೀಸ್ ಬೋರ್ಡಿನಲ್ಲಿ ಅಂಟಿಸಲಾಗಿದ್ದು, ₹21 ಲಕ್ಷಗಳಿಗೆ 8 ವರ್ಷದ ಬಡ್ಡಿಗೆ ಬಾಕಿದಾರರೇ ಹೊಣೆಗಾರರಾಗಿದ್ದಾರೆ. ಹರಾಜಿನ ಸಮಯದಲ್ಲಿ ಕರ್ತವ್ಯದಲ್ಲಿರುವ ಅಧಿಕಾರಿಗಳು ಹಾಗೂ ಆಡಳಿತ ಮಂಡಳಿಯವರು ಹೊಣೆಗಾರರಾಗಿರುವುದಾಗಿ ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರ ಆಕ್ಷೇಪಣೆಯನ್ನು ಅಲ್ಲಗಳೆದಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕ್ ಅನವಟ್ಟಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಡುವ ಅಂಗಡಿ, ಮಳಿಗೆಗಳ ಬಾಡಿಗೆ, ಸಂತೇ ಸುಂಕ, ಹರಾಜು ವಸೂಲು ಹಾಗೂ ಇತರೆ ವ್ಯವಹಾರಗಳಿಂದ ಸುಮಾರು 2006–07 ರಿಂದ 2013–14ನೇ ಸಾಲಿನವರೆಗೆ ₹21 ಲಕ್ಷ ಬಾಕಿ ಬರಬೇಕಾಗಿದ್ದು, ಈ ಬಗ್ಗೆ ಗ್ರಾಮ ಪಂಚಾಯತ್‌ನ ಸಾಮಾನ್ಯ ಸಭೆಯಲ್ಲಿ ಸದರಿ ₹21 ಲಕ್ಷ ಹಣವನ್ನು ವಸೂಲು ಮಾಡುವ ಬಗ್ಗೆ ಸಭೆಯಲ್ಲಿ ತೀರ್ಮಾನವಾಗಿರುವುದು ಕಂಡು ಬಂದಿದೆ. ಈ ಬಗ್ಗೆ ಎದುರುದಾರರು ಬಾಕಿದಾರರಿಗೆ ಕೇವಲ ನೋಟೀಸನ್ನು ಮಾತ್ರ ನೀಡಿದ್ದು, ಸದರಿ ಸರ್ಕಾರಿ ಹಣದ ವಸೂಲಾತಿಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಸರ್ಕಾರಕ್ಕೆ ಬರಬೇಕಾದ ಹರಾಜು ಬಾಕಿ ಮತ್ತು ಇತರೆ ಬಾಬ್ತುಗಳಿಂದ ಬರುವ ಹಣವನ್ನು ಸಂಬಂಧಪಟ್ಟ ಬಾಕಿದಾರರಿಗೆ ನೋಟೀಸ್ ನೀಡಿ, ಅದನ್ನು ವಸೂಲಿ ಮಾಡಬೇಕಾಗಿರುವುದು ಎದುರುದಾರರ ಕರ್ತವ್ಯವಾಗಿದೆ. ಸದರಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸಂಬಂಧಿಸಿದಂತೆ, ಒಟ್ಟು ₹21 ಲಕ್ಷ ಬಾಕಿ ಇದ್ದರೂ ಸಹ ಸದರಿ ಹಣದ ವಸೂಲಾತಿಯ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಈ ಬಗ್ಗೆ ಪಂಚಾಯತ್ ಸಭೆ ನಿರ್ಣಯಿಸಿದ್ದರೂ ಸಹ ಸದರಿ ಹಣದ ವಸೂಲಾತಿಗೆ ಯಾವುದೇ ಕ್ರಮ ಕೈಗೊಳ್ಳದೇ ಎದುರುದಾರರು ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆ.

Sd/-

6. ಮೇಲ್ಕಂಡ ಅಂಶಗಳು, ಕಡತತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಆದ್ದರಿಂದ, ಸದರಿ ₹21 ಲಕ್ಷ ಬಾಕಿ ಹಣವನ್ನು ಬಾಕಿದಾರರಿಂದ ಕಾನೂನಿನ ಪ್ರಕಾರ ವಸೂಲಿ ಮಾಡುವಂತೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 31/7/17.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**